(ii) reg:-Crushing of Sugarcane by the Mysore Sugar co, Mandya

SRI M.S. ATHMANANDA: –Sir, I call the attention of the Hone Chief Minister to the slow pace of crushing of sugarcane by th– Mysore Sugar Company, Mandya due to enlarged area under sugar, cane crop.

SRI M. VEERAPPA MOILY (Hon. Minister for Finance):—Sir, on behalf of the Hon. Chief Minister, I wish to make the following statement.

As against the crushing capacity of 5000 tonnes of cane per day. the Mandya factory has been crushing on average at the rate of 2500 tonnes per day since the commencement of crushing operations on 15th June 1981. This was because only one Mill viz., 'C' Mill has been functioning at the factory effectively. The 50 year old 'B' Mill which has been rehabilitated was commissioned only on the 25th November 1981. This Mill developed teething troubles during the trial run and required adjustments of its various components The crushiug on this mill could be stabilised around 1800 tonnes per day by first week of January 1982. Unfortunately, the 'C' Mill which all alone had crushed 4.5 lakh tonnes of cane suffered a major brakedown on 4th January 1982 and all hopes of running this mill for the season had tobe given up. However, on account of persistant efforts made by the management, replacement for its broken down shaft was obtained from M/s. K.C.P. Limited, Madras who are suppliers of this Mill. and the 'C' Mill was restarted in the third week of February 1982. During the period the 'C' Mill was not functioning continuity of crushing at the factory was maintained by running the rehabllitated 'B' Mill.

It has to be pointed out here that the rate of crushing has in no way affected the cane growers of Maadya area and so far the Company has not received any complaints from the cane growers in this behalf. Infact, as against the Oppige Cane of 4.5 lakh tonnes, the factory has already crushed 5.5 lakh tonnes as on date Though the targetted crush was 6.8 lakh tonnes, there is no more mature cane available in the factory area. The Mandya factory is still prepared to crush another one lakh tonne of cane. But for the past 15 days cane supply is found to be inadequate and the factory is receiving 8 to 10 months old immature cane, which is meant for crushing in the next season commencing f om 1st July 1982. With the result the cane recovery which was more than 10% has now come down to around 9.5%. The factory therefore has been forced to stop crushing operations for want of cane and the 23rd March 1982

has been notified as the date of closure of operations for the current season.

Thus it is clear from the figures that the Mysore Sugar Company has not only consumed the entire sugarcane in the notified area but has crushed one lakh tonne more of sugarcane grown in Mandya District.

ಶ್ರೀ ಎಂ.ಎಸ್ ಆತ್ಮಾನಂದ.—ಈ ಸಕ್ಕರೆ ಕಾರ್ಖಾನೆಯಲ್ಲಿ ೫ ಸಾವಿರ ಟನ್ ಕಬ್ಬನ್ನು ಅರೆಯುವ ಸಾಮರ್ಥ್ಯವಿದ್ದರೂ ಸಹ ಎರಡೂವರೆ ಸಾವಿರ ಟನ್ ಕಬ್ಬನ್ನು ಮಾತ್ರ ಅರೆಯುವುದಕ್ಕೆ ಕಾರಣ ವೇನು?

ಎರಡನೆಯದಾಗಿ ೫೦ ವರ್ಷಗಳಷ್ಟು ಹಳೆಯದಾದ 'ಬಿ' ಮಿಲ್ಲನ್ನು ನವೆಂಬರ್–೧೯೮೨ರಂದು ಕಮಿಷನ್ ಮಾಡಬೇಕಾಗಿತ್ತು. ಆದರೆ ಇದು ಜನವರಿಗೆ–೧೯೮೨ರವರೆಗೆ ನಿಧಾನವಾಗಲು ಕಾರಣ ವೇನೆಂಬುದನ್ನು ತಿಳಿಸಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಈಗಾಗಲೇ ಹೇಳಿದಂತೆ ಈ ಸಕ್ಕರೆ ಕಂಪನಿಗೆ ಈ ಸಾರಿ ಗರಿಷ್ಠಮಟ್ಟದಲ್ಲಿ ಕಬ್ಬನ್ನು ಅರೆಯುವಂತಹ ಸಾಮರ್ಥ್ಯವಿತ್ತು. ಜನವರಿಯಲ್ಲಿ ಈ ಕಾರ್ಖಾನೆಯನ್ನು ಕೋಸ್ ಮಾಡಬೇಕಾಗಿತ್ತು. ಆದರೂ ಸಹ ಮಾರ್ಚ್ ೨೩ರವರೆಗೆ ಮುಂದುವರೆಸಲಾಗಿದೆ.

CHAIRMAN.—His point is, when the crushing capacity is 5,000 tonnes, why it has been reduced to 2,500 tonnes?

SRI M. VEERAPPA MOILY.—Sir, I have given figures spread over for the entire season. Anyhow, the target has been reached. The Mysore Sugar Company was prepared take one lakh tonne more of sugarcane, but sugarcane was not available. But, only 8 to 10 months old Premature cane was available. As a result of which the return was reduced from 10% to 9.5%.

ಶ್ರೀ ಎಂ.ಎಸ್. ಆತ್ಮಾನಂದ.—ಇದರ ಸಾಮರ್ಥ್ಯ ೫ ಸಾವಿರ ಟನ್ ಇದ್ದರೂ ಸಹ ಎರಡೂವರೆ ಸಾವಿರ ಟನ್‌ಗಳಷ್ಟು ಮಾತ್ರ ಅರೆದಿರಲು ಕಾರಣವೇನು? ಈ ಮಂಡ್ಯ ಸಕ್ಕರೆ ಕಾರ್ಖಾನೆಯನ್ನು ೫ ಕೋಟಿ ರೂ.ಗಳನ್ನು ಖರ್ಚು ಮಾಡಿ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೆಚ್ಚು ಮಾಡಲಾಗುತ್ತ ದೆಂದು ೧೯೮೧–೮೨ರಲ್ಲಿ ಸರ್ಕಾರದವರು ಹೇಳಿದ್ದರೂ ಸಹ ಎರಡೂವರೆ ಸಾವಿರ ಟನ್ ಕಬ್ಬನ್ನು ಮಾತ್ರ ಅರೆಯಲು ಕಾರಣವೇನು?

ಶ್ರೀ ಎಚ್.ಡಿ. ಚೌಡಯ್ಯ.—ಎಲ್ಲ ಕಬ್ಬನ್ನು ಸಹ ಜನವರಿ ತಿಂಗಳೊಳಗಾಗಿ ಅರೆದು ಮುಗಿಸ ಬೇಕಾಗಿತ್ತು. ಆದರೆ ಮಾರ್ಚಿ ತಿಂಗಳವರೆಗೆ ಮುಂದುವರೆಸಲಾಗಿದೆ. ಇದರಿಂದ ರೆಕವರಿ ಕಡಿಮೆ ಯಾಗಿದೆ. 'ಬಿ' ಮಿಲ್ ನವೆಂಬರ್ ತಿಂಗಳಲ್ಲಿಯೇ ರೀಹ್ಯಾಬಿಲಿಟೇಷನ್ ಆಗಬೇಕಾಗಿತ್ತು. ಆದರೆ ನಾನಾ ತೊಂದರೆಗಳು ಬಂದ ಕಾರಣದಿಂದ ಕೋಟ್ಯಾಂತರ ರೂ.ಗಳನ್ನು ಖರ್ಚು ಮಾಡಿದರೂ ಸಹ ಅದೇ ತಿಂಗಳಲ್ಲಿ ಮಾಡಲು ಸಾಧ್ಯವಾಗಲಿಲ್ಲ. ಈ ಮಿಲ್‌ನ ಕಾರ್ಯ ೧೯೮೨ರ ಜನವರಿಯಲ್ಲಿ ಪ್ರಾರಂಭ ವಾಯಿತು. 'ಸಿ' ಮಿಲ್ ಸಹ ಕೆಟ್ಟ ಮೇಲೆ ಅದನ್ನು ತಿಂಗಳೇಗಟ್ಟಲೆ ಸರಿಮಾಡಲು ಸಾಧ್ಯವಾಗಲಿಲ್ಲ. ಒಟ್ಟಿನಲ್ಲಿ ಈ ಎರಡೂ ಮಿಲ್‌ಗಳು ಸರಿಯಾಗಿ ಕೆಲಸ ಮಾಡದ ಕಾರಣದಿಂದ ಕಬ್ಬು ಅರೆಯುವ ಕೆಲಸ ವನ್ನು ಮಾರ್ಚಿ ತಿಂಗಳವರೆಗೆ ಮುಂದುವರೆಸಬೇಕಾಯಿತು. ಆಲ್ಲಿ ಪ್ರತಿದಿನವೂ ೫ ಸಾವಿರ ಟನ್ ಕಬ್ಬನ್ನು ಅರೆದಿದ್ದರೆ ಜನವರಿಯಲ್ಲಿಯೇ ಕಾರ್ಖಾನೆಯನ್ನು ಮುಚ್ಚಬಹುದಾಗಿತ್ತು. ಇದರಿಂದ ರೈತರಿಗೂ ಸಹ ಹೆಚ್ಚಿನ ಲಾಭ ಸಿಗುತ್ತಿತ್ತು. ಆದರೆ ಈಗ ಕಬ್ಬನ್ನು ಅರೆಯುವ ಸಾಮರ್ಥ್ಯ ಕಡಿಮೆ ಯಾಗಿರುವುದರಿಂದ ಮಾರ್ಚಿ ತಿಂಗಳವರೆಗೆ ಮುಂದುವರೆಸಬೇಕಾಗಿದೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿಸುವುದು ಸೂಕ್ತ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಆ ರೀತಿ ತೊಂದರೆಯಾಗಲು ಕಾರಣವೇನೆಂಬುದನ್ನು ವಿಚಾರ ಮಾಡೋಣ, ಪರಿಶೀಲನೆ ಮಾಡೋಣ. ಆದರ ಇಲ್ಲಿ ಕಬ್ಬು ಅರೆಯುವ ಕೆಲಸಮಾತ್ರ ಯಾವುದೇ ಕಾರಣದಿಂದ ನಿಂತಿಲ್ಲ. ಈ ಸಲ ಅಲ್ಲಿ ಗರಿಷ್ಠ ಮಟ್ಟದಲ್ಲಿ ಕಬ್ಬನ್ನು ಅರೆಯಲಾಗಿದೆ. The factory was prepared to absorb any capacity of Sugarcane. Of course, in the begining there was some problem in the machine, but, it was set right.

ಶ್ರೀ ಎಂ.ಎಸ್. ಆತ್ಮಾನಂದ.—೫-೬ ಕೋಟಿ ರೂಪಾಯಿಗಳನ್ನು ಈ ಕಾರ್ಖಾನೆಯ ಸುಧಾರಣೆಗೆ ಖರ್ಚು ಮಾಡಿದ ನಂತರವೂ ಸಹ ಪ್ರತಿದಿವಸ ೫ ಸಾವಿರ ಟನ್ ಕಬ್ಬನ್ನು ಅರೆಯುವುದಕ್ಕೆ ಸಾಧ್ಯವಾಗಿಲ್ಲ ಎರಡೂವರೆ ಸಾವಿರ ಟನ್‌ಗಳಷ್ಟು ಮಾತ್ರ ಅರೆಯಲಾಗುತ್ತಿದೆ. ೫ ಸಾವಿರ ಟನ್ ಕಬ್ಬನ್ನು ಪ್ರತಿ ದಿವಸ ಅರೆದಿದ್ದರೆ ಜನವರಿ ತಿಂಗಳಲ್ಲಿಯೇ ಈ ಕಾರ್ಖಾನೆಯ ಕೆಲಸವನ್ನು ನಿಲ್ಲಿಸಬಹುದಾಗಿತ್ತು. ಒಟ್ಟಿನಲ್ಲಿ ಅಲ್ಲಿನ ಎಕ್ಸ್‌ಪ್ಯಾನ್‌ಷನ್ ಪ್ರೊಗ್ರಾಮ್ ಕೆಲಸ ಸರಿಯಾಗಿ ಆಗಲಿಲ್ಲ ಎಂಬುದು ನನ್ನ ಅನಿಸಿಕೆಯಾಗಿದೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿಸುತ್ತೀರಾ?

ಶ್ರೀ ಎಂ. ವೀರಪ್ಪಮೊಯ್ಲಿ.—ಪ್ರತಿದಿವಸ ೫ ಸಾವಿರ ಕಬ್ಬನ್ನು ಅರೆಯಬೇಕಾದರೆ ಅಷ್ಟು ಕಬ್ಬು ಕಾರ್ಖಾನೆಗೆ ಬರಬೇಕಾಗುತ್ತದೆ. ಈಗ ಅಲ್ಲಿಗೆ ಎಷ್ಟು ಕಬ್ಬು ಬರುತ್ತಿದೆಯೋ ಅಷ್ಟು ಕಬ್ಬನ್ನು ಸಹ ಅರೆಯಲಾಗುತ್ತಿದೆ, In a particular given period it is...

SRI H.D. CHOWDAIAH.—Sir, sugar was available in plenty in the months of November, December and January. ಈಗ ಅಲ್ಲಿ ಎರಡು ಮಿಲ್‌ಗಳಿದ್ದರೂ ಸಹ ಬಂದಂಥ ಕಬ್ಬನ್ನು ಅರೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇದನ್ನು ತನಿಖೆ ಮಾಡಿಸಿ ಎಂದು ನಾವು ಕೇಳುತ್ತಿರುವುದು,

ಶ್ರೀ ಎಂ. ವೀರಪ್ಪಮೊಯ್ಲಿ.—ತನಿಖೆ ಮಾಡಿಸುತ್ತೇನೆ

(*iii*) *reg: Hunger strike by the month Examiners in Sericulture Department.*

SRI RAJU GOWDA.—Sir, I call the attention of the Hon. Chief Mintster regarding the hunger strike by the temporary moth examiners of Sericulture Department.

(Minister for law and parliamentary Affairs)

SRI Y. RAMAKRISHNA.—Sir, on behalf of the Hon. Chief Minister. I wish to make the following statement.

೧೯೮೦ರಲ್ಲಿ ಕರ್ನಾಟಕ ರಾಜ್ಯದ ಬೈವೋಲ್ಟೈನ್ ಮತ್ತು ಮೈಸೂರು ಜಾತಿಯ ರೇಷ್ಮೆ ಬಿತ್ತನೆ ಗೂಡು ಬೆಳೆಯುವ ಪ್ರದೇಶಗಳಲ್ಲಿ ರೇಷ್ಮೆ ಹುಳುಗಳಿಗೆ ರೋಗಗಳು ತಗುಲಿದವು. ಅದರಲ್ಲೂ ಪೆಬ್ರಿನ್ ಅಂದರೆ ಗಂಟು ರೋಗವು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿತು. ರೇಷ್ಮೆ ಹುಳುವಿನ ರೋಗಗಳಲ್ಲಿ ಗಂಟು ರೋಗವು ತಾಯಿ ಚಿಟ್ಟೆಯಿಂದ ಅದು ಇಟ್ಟ ಮೊಟ್ಟೆಗಳ ಮುಖಾಂತರ ಮರಿಗಳಿಗೆ ಸಾಗಿಸಲ್ಪಡುತ್ತದೆ. ರೋಗ ಹರಡುವುದನ್ನು ತಡೆಗಟ್ಟಲು ಮತ್ತು ಹತೋಟಿಯಲ್ಲಿಡಲು ರೋಗಗ್ರಸ್ಥ ಮೊಟ್ಟೆಗಳನ್ನು ನಾಶಪಡಿಸಬೇಕು ಹಾಗೂ ರೋಗರಹಿತ ಮೊಟ್ಟೆಗಳನ್ನು ಸಾಕಣಿಕೆಗೆ ಕೊಡಬೇಕು. ಮೊಟ್ಟೆಗಳು ರೋಗಗ್ರಸ್ಥವೇ ಇಲ್ಲ ರೋಗರಹಿತವೇ ಎಂಬುದನ್ನು ಖಾತರಪಡಿಸಿಕೊಳ್ಳಲು ತಾಯಿ ಚಿಟ್ಟೆಗಳನ್ನು ಹಾಗೂ ಪ್ಯೂಪಾಗಳನ್ನು ಸೂಕ್ಷ್ಮ ದರ್ಶಕದ ಮೂಲಕ ಪರೀಕ್ಷೆ ಮಾಡಬೇಕು. ಹೀಗೆ ಮಾಡಲು ಪ್ಯೂಪಾ ಮತ್ತು ತಾಯಿ ಚಿಟ್ಟೆಗಳನ್ನು ಅರೆದು ಅವುಗಳಲ್ಲಿ ಇರುವ ಕೊಬ್ಬನ್ನು ಪೊಟಾಷಿಯಂ ಹೈಡ್ರಾಕ್ಸೈಡ್‌ನಿಂದ ಕರಗಿಸಿ ಶರೀರದ ದ್ರವವನ್ನು ಗಾಜಿನ ಸ್ಲೈಡಿನ ಮೇಲೆ ಹಾಕಿ ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಲಾಗುವುದು. ಒಂದು ಅಥವಾ ಎರಡು ಪೆಬ್ರಿನ್ ಕಣಗಳು (ಸ್ಪೋರ್ಸ್) ಕಾಣ ಬಂದರೆ ತಾಯಿ ಚಿಟ್ಟೆಯಲ್ಲಿ ಸುಮಾರು ೨೦ ಸಾವಿರದಿಂದ ೩೦ ಸಾವಿರದವರೆಗೆ ಪೆಬ್ರಿನ್ ಕಣಗಳಿವೆಯೆಂಬುದು ಖಚಿತ. ಪರೀಕ್ಷಕನ ದೃಷ್ಟಿಗೆ ಈ ಒಂದೆರಡು ಕಣಗಳು ಕಾಣದಿದ್ದರೆ ಆ ತಾಯಿ ಚಿಟ್ಟೆ ಇಟ್ಟ ತತ್ತಿಗಳ ಮುಖಾಂತರ ರೋಗದ ಕಣಗಳು